## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 2141(2514) |
| ಸದಸ್ಯರ ಹೆಸರು : | ಶ್ರೀ ಕೆ.ಟಿ. ಶ್ರೀಕಂಠೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 23-03-2022 |
| ಉತ್ತರಿಸಬೇಕಾದ ಸಚಿವರ ಹೆಸರು : | ಮಾನ್ಯ ಕಂದಾಯ ಸಚಿವರು |

| ಪ್ರಶ್ನೆ | | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಆತಗೂರು ಹೋಬಳಿಯ ಹೂತಗೆರೆಯಿಂದ ಅಂಕನಾಥಪುರಕ್ಕೆ ಹೋಗುವ ರಸ್ತೆಯ ನಿರ್ಮಾಣದಿಂದಾಗಿ ಕುಂದನಕುಪ್ಪೆ ಗ್ರಾಮದ ಎಷ್ಟು ಸರ್ವೆ ನಂಬರ್‌ಗಳಲ್ಲಿ ಜಮೀನು ರಸ್ತೆಗೆ ಅತಿವ್ಯಾಪ್ತಿಯಾಗಿದೆ; (ಸರ್ವೆ ನಂಬರ್‌ವಾರು / ವಿಸ್ತೀರ್ಣವಾರು / ವಿಳಾಸ ಸಹಿತ ಮಾಹಿತಿಯನ್ನು ನೀಡುವುದು) | ವಿಶೇಷ ಭೂಸ್ವಾಧೀನಾಧಿಕಾರಿ, ಮಂಡ್ಯ ಇವರ ವರದಿಯನ್ವಯ ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಆತಗೂರು ಹೋಬಳಿಯ ಹೂತಗೆರೆಯಿಂದ ಅಂಕನಾಥಪುರಕ್ಕೆ ಹೋಗುವ ರಸ್ತೆಯ ನಿರ್ಮಾಣಕ್ಕಾಗಿ ಕುಂದನಕುಪ್ಪೆ ಗ್ರಾಮದಲ್ಲಿನ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ. |
| ಆ) | ಸದರಿ ಅತಿವ್ಯಾಪ್ತಿಯಾಗಿರುವ ಜಮೀನುಗಳಿಗೆ ಇಲ್ಲಿಯವರೆಗೆ ಪರಿಹಾರ ಕೋರಿ ಎಷ್ಟು ಅರ್ಜಿಗಳನ್ನು ಸ್ವೀಕರಿಸಲಾಗಿದೆ; (ಮಾಹಿತಿಯನ್ನು ನೀಡುವುದು) | ಪ್ರಶ್ನೆ ಉದ್ಭವಿಸುವುದಿಲ್ಲ. |
| ಇ) | ಇಲ್ಲಿಯವರೆಗೆ ಪರಿಹಾರ ಕೋರಿ ಬಂದಿರುವ ಅರ್ಜಿಗಳಿಗೆ ಸಂಬಂಧಿಸಿದಂತೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? (ಮಾಹಿತಿ ನೀಡುವುದು) | ಪ್ರಶ್ನೆ ಉದ್ಭವಿಸುವುದಿಲ್ಲ. |

**ಸಂಖ್ಯೆ: ಕಂಇ 06 ಭೂಸ್ವಾಮ 2022**

(ಆರ್.ಅಶೋಕ)
ಕಂದಾಯ ಸಚಿವರು